# ಲೀಲಾ ಮುಖಾಮುಖಿ ಮನೆಯಲ್ಲಿ ಜ್ವಾಲಾಮುಖಿ!

**ಮಲ್ಲೈಕಾ ಟಿ. ವಸುಪಾಲ್**
ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದ ಲೀಲಾ



◆ **ಲೀಲಾ ಏಕೆ ಯಡವಟ್ಟಿಗೆ ಹೆಸರುವಾಸಿ?**

ಉದ್ದೇಶ ಮಾತ್ರ ಒಳ್ಳೆಯದೇ ಆಗಿರುತ್ತದೆ. ಏನೋ ಮಾಡಲು ಹೋಗಿ ಇನ್ನೇನೋ ಆಗುವುದರಿಂದ ಯಡವಟ್ಟುಗಳು ಆಗುತ್ತಲೇ ಇರುತ್ತವೆ. ಒಳ್ಳೆಯದಾಗಲಿ ಎಂದು ಸಹಾಯ ಮಾಡುವ ಲೀಲಾ ಆತ್ಮವಿಶ್ವಾಸ ಇರುವ ಹುಡುಗಿ. ತಾನು ಮಾತ್ರ ಯಾವುದಕ್ಕೂ ಅಂಜದೆ ದೃಢ ನಿರ್ಧಾರವನ್ನು ತೆಗೆದುಕೊಳ್ಳುತ್ತಾಳೆ. 'ನನ್ನ ಕೈಯಿಂದ ಏನೂ ಆಗುವುದಿಲ್ಲ' ಎನ್ನುವವರಿಗೂ ಭರವಸೆಯನ್ನು ತುಂಬುವ ಅದಕ್ಕೆ ಹಲವು ನಿದರ್ಶನಗಳನ್ನು ನೀಡುವ ಹುಡುಗಿ. ಎಲ್ಲರಿಗೂ ಅವರದೇ ಆದ ಶಕ್ತಿ ಸಾಮರ್ಥ್ಯ ಇರುತ್ತದೆ ಎನ್ನುವುದನ್ನು ಅವರಿಗೆ ಮನವರಿಕೆ ಮಾಡುತ್ತೇನೆ.

◆ **ಅಡೋಲ್ಫ್ ಹಿಟ್ಲರ್‌ಗೂ ಝೀ ಕನ್ನಡ ಹಿಟ್ಲರ್‌ಗೂ ಏನೂ ಸಂಬಂಧ?**

ಸಂಬಂಧ ಏನೂ ಇಲ್ಲ. ಹಿಟ್ಲರ್‌ನ ಜೀವನ ಶೈಲಿ ಮತ್ತು ಶಿಸ್ತುಬದ್ಧತೆ ಇಲ್ಲಿ ಒಂದು ಅಂಶ ಅಷ್ಟೇ. ಜರ್ಮನಿಯನ್ನು ಆಳಿದ ಹಿಟ್ಲರ್ ಇಲ್ಲಿ ಯಾವ ರೀತಿಯಿಂದಲೂ ಸಂಬಂಧವನ್ನು ಬೆಸೆಯಲೂ ಆಗುವುದಿಲ್ಲ. ಝೀ ಕನ್ನಡದ ಹಿಟ್ಲರ್ ತಮ್ಮದೇ ಆದ ಶಿಸ್ತಿನ ಜೀವನವನ್ನು ರೂಢಿಸಿಕೊಂಡಿದ್ದಾರೆ. ಎಲ್ಲ ವಿಷಯದಲ್ಲೂ ಅವರಿಗೆ ಸ್ಪಷ್ಟತೆ ಇದೆ.

◆ **ನಟಿಯಾಗುವ ಆಸಕ್ತಿ ನಿಮ್ಮಲ್ಲಿ ಮೂಡಿದ್ದು ಹೇಗೆ?**

ಆ ಕನಸು ನನಗೆ ಮೊದಲಿನಿಂದ ಇತ್ತು. ಇದು ನನ್ನ ಮೊದಲ ಧಾರಾವಾಹಿ. ಈಚೆಗೆ ನನ್ನ ಎಂಜಿನಿಯರಿಂಗ್ ಮುಗಿಸಿದೆ. ನಾನು ನಟನೆಯನ್ನು ಬಿಟ್ಟು ಬೇರೆ ಏನನ್ನೂ ಯೋಚಿಸಿರಲಿಲ್ಲ. ಹಾಗಾಗಿ ನನ್ನ ಬಿಇ ಮುಗಿದ ನಂತರ ಸೀದಾ ಅಭಿನಯಕ್ಕೆ ಬಂದೆ. ಪದವಿ ಮುಗಿಯುವ ಹೊತ್ತಿಗೆ ತುಂಬಾ ಆಡಿಷನ್‌ಗೆ ಕಾಲ್ ಬರ್ತಾ ಇದ್ದವು. ಏಕಕಾಲಕ್ಕೆ ಕಾಲ ಕೂಡಿ ಬಂದಿದ್ದರಿಂದ ಎಲ್ಲ ಸರಿ ಆಯಿತು.

ಅಭಿನಯದ ಹಾದಿಯ ಆರಂಭದ ನಡಿಗೆ ಸುಲಭ ಇರಲಿಲ್ಲ. ದಾವಣಗೆರೆಯ ನಾನು ಪ್ರತಿ ಆಡಿಷನ್‌ಗೆ ಅಲ್ಲಿಂದ ಬೆಂಗಳೂರಿಗೆ ಬಂದು ಹೋಗುವುದು ಕಷ್ಟ ಆಗ್ತಾ ಇತ್ತು. ನನ್ನ ತಂದೆ ಕರೆದುಕೊಂಡು ಬರುತ್ತಿದ್ದರು. ಸುಮಾರು ಸಂದರ್ಭದಲ್ಲಿ ಪ್ರಯಾಣದಲ್ಲಿಯೇ ನಿದ್ದೆ ಮಾಡುತ್ತಿದ್ದೆ. ಕಾಲೇಜು ದಿನಗಳಲ್ಲಿಯೂ ಆಡಿಷನ್‌ಗೆ ಕರೆ ಬರುತ್ತಿದ್ದವು. ಮನೆಯಲ್ಲಿ ಓದನ್ನು ಪೂರ್ಣಗೊಳಿಸುವ ತನಕ ಕಳಿಸುವುದಿಲ್ಲ ಎಂದು ಹೇಳಿದ್ದರಿಂದ ಹೋಗುತ್ತಿರಲಿಲ್ಲ. ಝೀ ಕನ್ನಡದಿಂದ ಎರಡನೇ ಬಾರಿಗೆ ಕರೆಬಂತು ಅಷ್ಟರಲ್ಲಿ ನನ್ನ ಓದು ಮುಗಿದಿತ್ತು. ಹಾಗಾಗಿ ಹಾಜರಾದೆ. ಬೆಳಿಗ್ಗೆಯಿಂದ ರಾತ್ರಿಯ ತನಕ ಆಡಿಷನ್ ಮಾಡಿದರು. ಆ ದಿನವೇ ಆಯ್ಕೆ ಆಗಿರುವ ವಿಷಯ ತಿಳಿಸಿದರು. ನಂತರ ಕಾರ್ಯಗಾರ ಏರ್ಪಡಿಸಿದ್ದರು. ಅಲ್ಲಿ ಅಭಿನಯದ ಬಗ್ಗೆ ಅರಿವು ವಿಸ್ತಾರವಾಯಿತು.

◆ **ಮೊದಲ ದಿನದ ಅನುಭವ ಹೇಗಿತ್ತು?**

ಚೆನ್ನಾಗಿತ್ತು ಅನ್ನಲು ಆಗುವುದಿಲ್ಲ, ಸಿಕ್ಕಾಪಟ್ಟೆ ಭಯಗೊಂಡಿದ್ದೆ. ಅಲ್ಲಿ ಅಷ್ಟು ಆತ್ಮೀಯ ಸಂಬಂಧವೂ ಬೆಸೆದುಕೊಂಡಿರಲಿಲ್ಲ. ಯಾರೂ ಪರಿಚಯ ಇರಲಿಲ್ಲ ಹಾಗಾಗಿ ಭಯ ಆಗುತ್ತಿತ್ತು. ನುಡಿ ಮತ್ತು ದೈಹಿಕ ಭಾಷೆಯಲ್ಲಿ ಹೊಂದಾಣಿಕೆ ಇರಬೇಕಿತ್ತು. ಕಷ್ಟ ಆಗಿತ್ತು, ಆದರೆ ಈಗ ಪಾತ್ರ ಮನದಲ್ಲಿ ಕುಳಿತಿದೆ, ತೊಂದರೆ ಅಂತ ಅನಿಸುವುದಿಲ್ಲ. ಮೊದಲ ಬಾರಿಗೆ ನಟನೆ ಮಾಡುತ್ತಿದ್ದೇನೆ ಅಂತ ಅನಿಸುವುದಿಲ್ಲ. ತುಂಬ ಸಹಜವಾಗಿ ಬರುತ್ತದೆ ಎಂದು ಜನ ಹೇಳಿದಾಗ ಖುಷಿ ಆಗುತ್ತದೆ.

◆ **'ಲೀಲಾ ಮುಖಾಮುಖಿ, ನಿಮ್ ಮನೆ ಪರದೆಯಲ್ಲಿ ಜ್ವಾಲಾಮುಖಿ!' ಏನಿದು ಘೋಷಣೆ?**

ಆಕೆ ಬಂದರೆ– ಮಾತನಾಡಿದರೆ ಬೆಂಕಿ ಹತ್ತುತ್ತೆ ಎನ್ನುವುದನ್ನು ಸಂಕೇತಿಸುತ್ತದೆ. ಆಕೆಗೆ ತುಂಬ ಆತ್ಮವಿಶ್ವಾಸ. ಜೀವನದ ಯಶಸ್ಸಿಗೆ ಅದೇ ಸೂತ್ರ ಎನ್ನುವುದನ್ನು ತೋರಿಸುತ್ತಾಳೆ. ಮಾತ್ರವಲ್ಲ ಯಡವಟ್ಟು ಸುಂದರಿ ನಾನೊಬ್ಬಳೇ ನನ್ನಂತೆ ಇನ್ನೊಬ್ಬರು ಇಲ್ಲ ಎನ್ನುವುದು ಇದರ ಅರ್ಥ.

◆ **ಇಂತಹ ಪಾತ್ರಕ್ಕೆ ಸೀಮಿತ ಆಗುತ್ತೇನೆ ಎಂದು ಅನ್ನಿಸಿದೆಯಾ?**

ಹೇಗೆ ಬರುತ್ತೋ ಹಾಗೆ ನೋಡುತ್ತೇನೆ. ಸಮಯ ಸಂದರ್ಭ ಹೇಗೆ ತೆಗೆದುಕೊಂಡು ಹೋಗುತ್ತೋ ಆ ಮಾರ್ಗದಲ್ಲಿ ಸಾಗುತ್ತೇನೆ. ಮೊದಲನೆಯ ಯತ್ನವೇ ಅದ್ದೂರಿಯಾಗಿ ಬಂದಿದೆ. ಒಳ್ಳೆಯ ಅವಕಾಶ ಸಿಗುತ್ತವೆ ಎನ್ನುವ ಭಾವನೆ ಇದೆ. ಲೀಲಾ ಪಾತ್ರವನ್ನು ಜನ ಇಷ್ಟುಪಡುತ್ತಾರೆ ಎಂದು ಗೊತ್ತಿತ್ತು. ಕೇವಲ ಎರಡು ಎಪಿಸೋಡ್ ನೋಡಿ ಈ ಪರಿ ಪ್ರೀತಿ ತೋರಿಸುತ್ತಾರೆ ಎಂದುಕೊಂಡಿರಲಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಸಿಕ್ಕಾಪಟ್ಟೆ ಪ್ರೋತ್ಸಾಹದ ಮಾತುಗಳು ಕೇಳಿಬರುತ್ತಿವೆ. ಸದ್ಯ ನನ್ನ ಬಗ್ಗೆ ಹೆಮ್ಮೆ, ಪಾತ್ರದ ಬಗ್ಗೆ ಖುಷಿ ಆಗುತ್ತದೆ ಮುಂದಿನದನ್ನು ನೋಡೋಣ. ಸಿಕ್ಕಿರುವ ಈ ಅವಕಾಶವನ್ನು ಮನಪೂರ್ವಕವಾಗಿ ಮಾಡಬೇಕು.

◆ **ಬೆಂಗಳೂರಿನ ಆರಂಭದ ಜೀವನ ಹೇಗೆನಿಸಿತು?**

ನಾನೊಬ್ಬಳೆ ಮಗಳು. ಅರಾಮಾಗಿ ಬೆಳೆದಿದ್ದೆ. ಪರಿಸ್ಥಿತಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಸ್ವಭಾವ ನನಗಿತ್ತು. ಆದರೆ, ಅಪ್ಪ–ಅಮ್ಮನನ್ನು ಬಿಟ್ಟಿರುವುದು, ಮನೆಯ ಊಟವನ್ನು ಮಿಸ್ ಮಾಡಿಕೊಳ್ಳುವುದು ತುಂಬ ಬೇಸರಮಾಡಿತು. ಒಮ್ಮೊಮ್ಮೆ ಬೇಡಪಾ ಇಷ್ಟು ಕಷ್ಟ ಏಕೆ ಈ ಪಾಡು. ಬೆಳಿಗ್ಗೆಯಿಂದ ಮಧ್ಯರಾತ್ರಿಯ ತನಕ ಚಿತ್ರೀಕರಣ ಮಾಡುವುದು. ಕೆಲಸಕ್ಕೆ ನಿಗದಿತ ಸಮಯ ಇಲ್ಲ. ನಿಮಿಷ – ನಿಮಿಷಕ್ಕೂ ಬೆಲೆ. ಈ ಒತ್ತಡ ಕಿರಿಕಿರಿ ಉಂಟುಮಾಡಿತ್ತು. ಕೆಲಸ ಇಷ್ಟವಾಗಲು ಶುರುವಾದ ಮೇಲೆ ಸರಿಹೋಯಿತು. ಈಗ ಪಿಕ್ನಿಕ್ ರೀತಿ ಅನಿಸುತ್ತದೆ. ನಮ್ಮ ಪ್ರೋಮೊವನ್ನು ಹೈದರಾಬಾದ್‌ನಲ್ಲಿ ಚಿತ್ರೀಕರಿಸಿದ್ದು ಅದಕ್ಕಾಗಿ ಐದು ದಿನ ರಾಮೋಜಿರಾವ್ ಫಿಲ್ಮ್‌ಸಿಟಿಯಲ್ಲಿ ಇದ್ದೆವು. ಆ ಜಾಗ ತುಂಬ ಖುಷಿ ಕೊಟ್ಟಿದೆ. ಅಂದುಕೊಂಡಿದ್ದಕ್ಕಿಂತ ಜಾಸ್ತಿನೇ ಮಾಡಿದ್ದೇನೆ ಅನಿಸುತ್ತಿದೆ. ಮೊದಲ ಯತ್ನದಲ್ಲಿ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ಸೆಟ್‌ನಲ್ಲಿ ನನ್ನನ್ನು ಮನೆ ಮಗಳಂತೆ ನೋಡಿಕೊಳ್ಳುತ್ತಾರೆ ಇದಕ್ಕಿಂತ ಹೆಚ್ಚಿಗೆ ಏನೂ ಬೇಕಿಲ್ಲ.

■ **ರಾಘವೇಂದ್ರ ಕೆ.**